ಕೋಮು ದಳ್ಳುರಿಯನ್ನು ಆರಿಸುವ ಪ್ರಾಮಾಣಿಕ ಪ್ರಯತ್ನ ಒಂದು ಮಟ್ಟದಲ್ಲಂತೂ ಶುರುವಾಯಿತು. ಆದರೆ ಹಾದಿತಪ್ಪಿದ ಮತಾಂಧರಿಂದಾಗಿ ಮೂಲಭೂತವಾದಿ ಕಾಯಿಲೆ ಉಲ್ಬಣಗೊಂಡು ನಡೆದ ಗಾಂಧೀ ಹತ್ಯೆಯಿಂದ ಮತ್ತೆ ಭಾರತ ದಿಕ್ಕೆಟ್ಟಿತು. ಆದರೂ ಗಾಂಧೀಜಿಯ ಬಲಿದಾನದಿಂದ ಭಾರತದ ಹಲವು ಭಾಗಗಳಲ್ಲಾದರೂ ಪಾಪಪ್ರಜ್ಞೆ ಆವರಿಸಿ ನಾಡು ಕಟ್ಟುವ ಕೆಲಸ ಮುಂದುವರಿಯಿತು. ಒಂದೆಡೆ ಅಂಬೇಡ್ಕರ್ ಆರಂಭಿಸಿದ ಸಮಾನತೆಯ ಕೆಲಸ, ಮತ್ತೊಂದೆಡೆ ಉದಾರವಾದಿ ಚಿಂತನೆಗಳನ್ನು ಒಳಗೊಂಡ ನೆಹರೂ ಸರ್ಕಾರ, ಸರ್ಕಾರವನ್ನು ತುದಿಗಾಲಲ್ಲಿ ನಿಲ್ಲಿಸಬಲ್ಲ ದಿಟ್ಟ ವಿರೋಧ ಪಕ್ಷ, ಸ್ವತಂತ್ರ ಪ್ರತಿಕೋದ್ಯಮ, ನಿಜಕ್ಕೂ ದೇಶಭಕ್ತರಾದ ಸಾಮಾನ್ಯ ಜನ ಎಲ್ಲವೂ ಸೇರಿ ಸ್ವಾತಂತ್ರ್ಯ ಚಳವಳಿಯ ಸ್ಪಿರಿಟ್ ಮುಂದಿನ ಮೂರು ದಶಕಗಳ ಕಾಲವಂತೂ ತೀರಾ ಮುಕ್ಕಾಗದಂತೆ ಮುಂದುವರಿಯಿತು.

ಅಂಬೇಡ್ಕರ್ ರಚಿಸಿದ ಭಾರತೀಯ ಸಂವಿಧಾನ ಮಂಡಿಸಿದ ಸಾಮಾಜಿಕ ನ್ಯಾಯದ ಕೆಲವು ಅಂಶಗಳನ್ನಾದರೂ ಇಂಡಿಯಾದ ಮೇಲ್ಜಾತಿಗಳು ಒಪ್ಪಿಕೊಂಡು, ದಮನಿತರಿಗೆ ಆಗಿದ್ದ ಚರಿತ್ರೆಯ ಅನ್ಯಾಯವನ್ನು ಸರಿಪಡಿಸಲು ಮೌನವಾಗಿಯಾದರೂ ಸಮ್ಮತಿಸಿದರು. ಈ ಮನಸ್ಥಿತಿ ಉಂಟಾಗಿದ್ದಕ್ಕೆ ಸ್ವಾತಂತ್ರ್ಯ ಚಳವಳಿಯ ಹಲವು ಧಾರೆಗಳು ಕಲಿಸಿದ ವೈಚಾರಿಕ ಪಾಠಗಳೂ, ಅಂಬೇಡ್ಕರ್ ಹೋರಾಟಗಳೂ, ಗಾಂಧೀಯುಗ ಕಲಿಸಿಕೊಟ್ಟ ಸಹನೆಯ ಪಾಠಗಳೂ ಪೂರಕವಾಗಿದ್ದವು. ಸಂವಿಧಾನದ ಆಶಯಕ್ಕೆ ಬದ್ಧವಾಗಿದ್ದ ಸ್ವಾತಂತ್ರ್ಯೋತ್ತರ ಮೊದಲ ದಶಕಗಳಲ್ಲಿನ ಸರ್ಕಾರಗಳೂ ಈ ಪ್ರಗತಿಗಳಿಗೆ ಕಾರಣವಾದವು. ಭಾರತದ ಚಹರೆಯನ್ನೇ ಬದಲಿಸಿದ ಈ ಎಲ್ಲ ಬದಲಾವಣೆಗಳಿಗೆ ತಕ್ಕ ಸಿದ್ಧತೆಗಳನ್ನೂ ಸ್ವಾತಂತ್ರ್ಯ ಚಳವಳಿಯೇ ರೂಪಿಸಿತ್ತೆಂಬುದನ್ನು ಚರಿತ್ರೆಯ ಪುಟಗಳೇ ಹೇಳುತ್ತವೆ.

## 4

ಸ್ವಾತಂತ್ರ್ಯ ಚಳವಳಿಯ ಕಾಲದ ಪಾಠಗಳ ಹೋರಾಟಗಳ ಗುಂಗು ಹಾಗೂ ಸ್ಫೂರ್ತಿಯ ಮೂಲಕವೇ ಆ ನಂತರದ ಹೊಸ ಹೊಸ ಚಳವಳಿಗಳು ಇನ್ನಷ್ಟು ಹೊಸ ದಿಕ್ಕು, ಗುರಿಗಳತ್ತ ಹೊರಳಲು ಸಾಧ್ಯವಾಯಿತು. ಸ್ವಾತಂತ್ರ್ಯಾನಂತರ ಸ್ವಾತಂತ್ರ್ಯದ ಅರ್ಥವನ್ನು ಹಲ ಬಗೆಯಲ್ಲಿ ವಿಸ್ತರಿಸಿಕೊಂಡ ಈ ಚಳವಳಿಗಳು ತಮ್ಮ ಗುರಿಗಳನ್ನು ಅಷ್ಟಿಷ್ಟಾದರೂ ಸಾಧಿಸಿದವು. ‘ಉಳುವವನಿಗೇ ಭೂಮಿ’ ಕುರಿತ ಕಮ್ಯುನಿಸ್ಟ್ ಹಾಗೂ ಸಮಾಜವಾದಿ ಪಕ್ಷಗಳ ಹೋರಾಟಗಳಿಂದಾಗಿ ಮುಂದೆ ಈ ಬೇಡಿಕೆಗಳು ಕಾನೂನಾಗುವ ಕಾಲವೂ ಬಂತು. ಅದೇ ರೀತಿ ಕಾರ್ಮಿಕ ಚಳವಳಿಗಳು, ಸ್ವಾಭಿಮಾನಿ ಚಳವಳಿಗಳು. ದಲಿತ, ಹಿಂದುಳಿದ ವರ್ಗಗಳ ಸಬಲೀಕರಣದ ಚಳವಳಿಗಳು, ಸ್ತ್ರೀ ಸಮಾನತೆಯನ್ನು ಗುರಿಯಾಗಿಟ್ಟುಕೊಂಡ ಮಹಿಳಾ ಚಳವಳಿಗಳು, ಮಾನವ ಹಕ್ಕುಗಳ ಚಳವಳಿಗಳು ಕೂಡ ತಮ್ಮ ಗುರಿಗಳತ್ತ ನಡೆದಿವೆ. 2020ರ ಇಡೀ ವರ್ಷ ಭಾರತದ ರೈತರು ದೆಹಲಿ–ಟಿಕ್ರಿ ಗಡಿಯಲ್ಲಿ ಹಗಲೂ ರಾತ್ರಿ ಬೀಡುಬಿಟ್ಟು ಚಳವಳಿ ನಡೆಸಿ ಸ್ವಾತಂತ್ರ್ಯ ಚಳವಳಿಯ ಸತ್ವ ಈ ದೇಶದಲ್ಲಿ ಇನ್ನೂ ಬತ್ತಿಲ್ಲವೆಂಬುದನ್ನು ತೋರಿಸಿದರು. ಅದರ ಹಿಂದಿನ ವರ್ಷ ಇದೇ ಬಗೆಯ ಛಾತಿಯನ್ನು ದೆಹಲಿಯ ಶಾಹೀನ್ ಬಾಗ್‌ನಲ್ಲಿ ಧರಣಿ ಕೂತ ಮುಸ್ಲಿಂ ಮಹಿಳೆಯರು ಕೂಡ ತೋರಿದ್ದನ್ನು ಮರೆಯದಿರೋಣ. ಸ್ವಾತಂತ್ರ್ಯ ಚಳವಳಿಯನ್ನು ಮತ್ತೆ ಮತ್ತೆ ನೆನಪಿಸುವ ಇಂಥ ಶಾಂತಿಯುತ ಚಳವಳಿಗಳಿಗೆ ಹಿನ್ನಡೆಯುಂಟು ಮಾಡುವ ಸಂಚುಗಳನ್ನೂ ಆಳುವ ವರ್ಗಗಳು ಮಾಡುತ್ತಲೇ ಇರುತ್ತವೆ. ಯೋಜಿತವಾಗಿ ಮನಸ್ಸುಗಳನ್ನು ಒಡೆಯುವ ಹುಸಿ ಚಳವಳಿಗಳನ್ನು ನಡೆಸುವ ಶಕ್ತಿಗಳು ದೇಶವನ್ನು ಹಿಂದೊಯ್ಯುವ ಕೆಲಸ ಮಾಡುತ್ತಲೇ ಇರುತ್ತವೆ. ಇದರ ಫಲವಾಗಿ ಪ್ರಜೆಗಳ ಸ್ವಾತಂತ್ರ್ಯಹರಣದ ಭೀಕರ ಪ್ರಕರಣಗಳು ಬ್ರಿಟಿಷ್ ಭಾರತಕ್ಕಿಂತ ಹೆಚ್ಚು ನಡೆದಿರುವ ಭೀಕರ ವಾಸ್ತವವೂ ನಮ್ಮ ಕಣ್ಣೆದುರಿಗಿದೆ.

ಕೇವಲ 75 ವರ್ಷಗಳ ಹಿಂದಿನ ಅಪೂರ್ವ ಸ್ವಾತಂತ್ರ್ಯ ಚಳವಳಿಯ ಚರಿತ್ರೆಯನ್ನೇ ಮರೆತ ಇಂಥ ಗುಂಪುಗಳು, ಸರ್ಕಾರಗಳು, ಪೊಲೀಸ್ ವ್ಯವಸ್ಥೆಗಳಿಂದ ಸೃಷ್ಟಿಯಾಗುವ ಮಾನವ ಹಕ್ಕುಗಳ ಹರಣಗಳ ಗಂಭೀರ ಪ್ರಕರಣಗಳ ಮಾರಕ ಪರಿಣಾಮವನ್ನು ಈ ತಲೆಮಾರುಗಳು ಗ್ರಹಿಸದಿದ್ದರೆ, ಅವರಿಗೆ ಸ್ವಾತಂತ್ರ್ಯ ಚಳವಳಿಯ ಸತ್ವ ಹಾಗೂ ಮಹತ್ವವೇ ಅರ್ಥವಾಗುವುದಿಲ್ಲ. ಭಾರತದಲ್ಲಿ ಈಚಿನ ದಶಕಗಳಲ್ಲಿ ಬಿತ್ತಲಾಗುತ್ತಿರುವ ಧಾರ್ಮಿಕ ವಿಭಜನೆಯ ಬೀಜಗಳು ಚರಿತ್ರೆಯ ಗಾಯಗಳನ್ನು ಸ್ವಹಿತಾಸಕ್ತಿಗಾಗಿ ಕೆದಕುವ ವರ್ಗಗಳಿಂದಲೂ ಹುಟ್ಟುತ್ತಿರುತ್ತವೆ ಎಂಬುದನ್ನು ಹೊಸ ತಲೆಮಾರು ಸರಿಯಾಗಿ ಅರ್ಥ ಮಾಡಿಕೊಳ್ಳಬೇಕು. ಜಾತಿ ಸಮಾನತೆಯನ್ನು ಸಾಧಿಸುವ ಚಿಂತನೆ–ಕಾರ್ಯಕ್ರಮಗಳು ಜಾರಿಗೆ ಬರುತ್ತಿರುವ ಈ ಕಾಲದಲ್ಲಿಯೂ ಜಾತಿಯ ಸಂಕುಚಿತ ಪ್ರಜ್ಞೆಯನ್ನು ಪೋಷಿಸುವ ವಿಕಾರವೂ

